ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 20-01-1990.

# *ಬ್ರಹ್ಮಾತಂದೆಯ ವಿಶೇಷ ಐದು ಹೆಜ್ಜೆಗಳು*

(ब्रहमा बाप के विशेष पांच कदम)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ವಿಶ್ವಸ್ನೇಹಿ ತಂದೆಯು ತನ್ನ ವಿಶೇಷ ಅತಿಸ್ನೇಹಿ ಮತ್ತು ಸಮೀಪ ಮಕ್ಕಳನ್ನು ನೋಡುತ್ತಿದ್ದಾರೆ. ಎಲ್ಲಾ ಮಕ್ಕಳೂ ಸ್ನೇಹಿಗಳಾಗಿದ್ದಾರೆ ಆದರೆ ಯಾರು ಪ್ರತೀ ಹೆಜ್ಜೆಯಲ್ಲಿ ಫಾಲೋ ಮಾಡುವರೋ ಅವರೇ ಅತಿಸ್ನೇಹಿ ಹಾಗೂ ಸಮೀಪ ಮಕ್ಕಳಾಗಿದ್ದಾರೆ. ನಿರಾಕಾರ ತಂದೆಯು ಸಾಕಾರಿ ಮಕ್ಕಳಿಗೆ ಸಾಕಾರ ರೂಪದಲ್ಲಿ ಫಾಲೋ ಮಾಡುವುದಕ್ಕಾಗಿ ಸಾಕಾರ ಬ್ರಹ್ಮಾತಂದೆಯನ್ನು ಮಕ್ಕಳಮುಂದೆ ನಿಮಿತ್ತವಾಗಿಟ್ಟರು ಆ ಆದಿಆತ್ಮನು ಡ್ರಾಮಾದಲ್ಲಿ 84 ಜನ್ಮಗಳನ್ನು ಆದಿಯಿಂದ ಅಂತ್ಯದವರೆಗೆ ಅನುಭವ ಮಾಡಿದರು. ಸಾಕಾರ ರೂಪದಲ್ಲಿ ಮಾಧ್ಯಮವಾಗಿ ಮಕ್ಕಳ ಮುಂದೆ ಸಹಜ ಮಾಡುವುದಕ್ಕಾಗಿ ಉದಾಹರಣಾ ಮೂರ್ತಿಯಾದರು ಏಕೆಂದರೆ ಶಕ್ತಿಶಾಲಿ ಉದಾಹರಣೆಯನ್ನು ನೋಡಿ ಫಾಲೋ ಮಾಡುವುದು ಸಹಜವಾಗುತ್ತದೆ ಆದ್ದರಿಂದ ಸ್ನೇಹಿ ಮಕ್ಕಳಿಗಾಗಿ ಸ್ನೇಹದ ಗುರುತಾಗಿ ತಂದೆಯು ಬ್ರಹ್ಮಾತಂದೆಯನ್ನು ಇಟ್ಟರು ಮತ್ತು ಸರ್ವಮಕ್ಕಳಿಗೆ ಇದೇ ಶ್ರೇಷ್ಠ ಶ್ರೀಮತವನ್ನು ಕೊಟ್ಟರು- ಪ್ರತೀ ಹೆಜ್ಜೆಯಲ್ಲಿ ಫಾಲೋಫಾದರ್. ಎಲ್ಲರೂ ತಮ್ಮನ್ನು ಫಾಲೋಫಾದರ್ ಮಾಡುವಂತಹ ಸಮೀಪ ಆತ್ಮರೆಂದು ತಿಳಿಯುತ್ತೀರಾ? ಫಾಲೋ ಮಾಡುವುದು ಸಹಜವೋ ಅಥವಾ ಕಷ್ಟವೆನಿಸುತ್ತದೆಯೋ? ಬ್ರಹ್ಮಾತಂದೆಯ ವಿಶೇಷ  ಯಾವ ಹೆಜ್ಜೆಗಳನ್ನು ನೋಡಿದಿರಿ"

1 ಎಲ್ಲದಕ್ಕಿಂತ ಮೊದಲಹೆಜ್ಜೆ ಸರ್ವಾಂಶತ್ಯಾಗಿ(ಸರ್ವಸ್ವತ್ಯಾಗಿ), ಕೇವಲ ತನುವಿನಿಂದ ಮತ್ತು ಲೌಕಿಕ ಸಂಬಂಧದಿಂದಷ್ಟೇ ಅಲ್ಲ ಆದರೆ ಎಲ್ಲದಕ್ಕಿಂತ ದೊಡ್ಡ ತ್ಯಾಗವೆಂದರೆ ಮೊದಲ ತ್ಯಾಗ - ಮನಸ್ಸು- ಬುದ್ಧಿಯಿಂದ ಸಮರ್ಪಣೆ. ಮನ-ಬುದ್ಧಿಯಲ್ಲಿ ಪ್ರತಿ ಸಮಯ, ಪ್ರತೀ ಕರ್ಮದಲ್ಲಿ ತಂದೆ ಮತ್ತು ಶ್ರೀಮತವು ಸ್ಮೃತಿಯಿತ್ತು ಸದಾ ಸ್ವಯಂನ್ನು ನಿಮಿತ್ತನೆಂದು ತಿಳಿದು ಪ್ರತೀ ಕರ್ಮದಲ್ಲಿ ಅತೀತ ಹಾಗೂ ಪ್ರಿಯರಾಗಿದ್ದರು. ದೇಹದ ಸಂಬಂಧದಿಂದ ನಾನು ಎಂಬುದರ ತ್ಯಾಗ, ಯಾವಾಗ ಮನ-ಬುದ್ಧಿಯು ತಂದೆಯ ಮುಂದೆ ಸಮರ್ಪಣೆ ಆಗಿಬಿಡುತ್ತದೆಯೋ ಆಗ ದೇಹದ ಸಂಬಂಧವು ಸ್ವತಹವಾಗಿಯೇ ತ್ಯಾಗವಾಗಿಬಿಡುತ್ತದೆ ಅಂದಮೇಲೆ ಮೊದಲ ಹೆಜ್ಜೆಯಾಗಿತ್ತು- ಸರ್ವಾಂಶತ್ಯಾಗಿ.

2. ಎರಡನೇ ಹೆಜ್ಜೆ - ಸದಾ ಆಜ್ಞಾಕಾರಿಯಾಗಿದ್ದರು. ಪ್ರತೀ ಸಮಯ. ಪ್ರತಿಯೊಂದು ಮಾತಿನಲ್ಲಿ ಸ್ವ-ಪುರುಷಾರ್ಥದಲ್ಲಿ ಇರಲಿ, ಯಜ್ಞ ಪಾಲನೆಯಲ್ಲಿರಲಿ ಮೊದಲು ನಿಮಿತ್ತನಾದರು ಏಕೆಂದರೆ ಬ್ರಹ್ಮಾರವರೊಬ್ಬರೇ ವಿಶೇಷ ಅತ್ಮರಾಗಿದ್ದಾರೆ. ಡ್ರಾಮಾದಲ್ಲಿ ಅವರ ವಿಚಿತ್ರ ಪಾತ್ರವು ನಿಗಧಿತವಾಗಿದೆ. ಒಂದೇ ಅತ್ಮನು ಮಾತೆಯೂ ಆಗಿದ್ದಾರೆ. ಪಿತನೂ ಆಗಿದ್ದಾರೆ. ಯಜ್ಞಪಾಲನೆಗೆ ನಿಮಿತ್ತರಾಗಿದ್ದರೂ ಸಹ ಸದಾ ಆಜ್ಞಾಕಾರಿಯಾಗಿದ್ದರು. ಸ್ಥಾಪನಾ ಕಾರ್ಯವು ಇಷ್ಟು ವಿಶಾಲವಾಗಿದ್ದರೂ ಯಾವುದೇ ಆಜ್ಞೆಯ ಉಲ್ಲಂಘನೆ ಮಾಡಲಿಲ್ಲ. ಪ್ರತೀ ಸಮಯ "ಆಯಿತು ಪ್ರಭು" ಎನ್ನುವ ಪ್ರತ್ಯಕ್ಷ ಸ್ವರೂಪವನ್ನು ಸಹಜರೂಪದಲ್ಲಿ ನೋಡಿದಿರಿ.

3. ಮೂರನೇ ಹೆಜ್ಜೆ - ಪ್ರತೀ ಸಂಕಲ್ಪದಲ್ಲಿ ವಿಶ್ವಾಸಪಾತ್ರನಾಗಿದ್ದರು ಹೇಗೆ ಪತಿವ್ರತಾ ನಾರಿಯು ಒಬ್ಬ ಪತಿಯ ವಿನಃ ಮತ್ತಾರನ್ನೂ ಸ್ವಪ್ನದಲ್ಲಿಯೂ ನೆನಪು ಮಾಡಲು ಸಾಧ್ಯವಿಲ್ಲವೋ ಹಾಗೆಯೇ ಪ್ರತೀಸಮಯ ಒಬ್ಬ ತಂದೆಯ ವಿನಃ ಯಾರೂ ಇಲ್ಲ. ಈ ವಿಶ್ವಾಸಪಾತ್ರದ ಪ್ರತ್ಯಕ್ಷ ಸ್ವರೂಪವನ್ನು ನೋಡಿದಿರಿ. ವಿಶಾಲ ಹೊಸಸ್ಥಾಪನೆಯ ಜವಾಬ್ದಾರಿಗೆ ನಿಮಿತ್ತರಾಗಿದ್ದರೂ ಸಹ ನಂಬಿಕೆಯ ಬಲದಿಂದ ಒಂದುಬಲ ಮತ್ತು ಒಂದು ಭರವಸೆಯಿಂದ ಪ್ರತ್ಯಕ್ಷಕರ್ಮದಲ್ಲಿ ಪ್ರತೀ ಪರಿಸ್ಥಿತಿಯನ್ನು ಪಾರು ಮಾಡಿದರು ಮತ್ತು ಮಾಡಿಸಿದರು.

4. ನಾಲ್ಕನೆಯ ಹೆಜ್ಜೆ - ವಿಶ್ವ ಸೇವಾಧಾರಿ. ಸೇವೆಯ ವಿಶೇಷತೆ ಏನೆಂದರೆ ಒಂದುಕಡೆ ಅತೀ ನಿರ್ಮಾಣ ವಿಶ್ವಸೇವಕ. ಇನ್ನೊಂದು ಕಡೆ ಜ್ಞಾನದ ಅಥಾರಿಟಿ(ಅಧಿಕಾರಿ) ಎಷ್ಟು ನಿರ್ಮಾಣತೆಯು ಅಷ್ಟೇ ನಿಶ್ಚಿಂತ ಚಕ್ರವರ್ತಿಯಾಗಿದ್ದರು. ಸತ್ಯತೆಯ ನಿರ್ಭಯತೆ- ಇದೇ ಸೇವೆಯ ವಿಶೇಷತೆಯಾಗಿದೆ. ಸಂಬಂಧಿಕರು, ರಾಜನೇತರು, ಧರ್ಮನೇತರು, ಹೊಸ ಜ್ಞಾನದ ಕಾರಣ ಎಷ್ಟೇ ವಿರೋಧಿಸಿದರೂ ಸತ್ಯತೆ ಮತ್ತು ನಿರ್ಭಯತೆಯ ಸ್ಥಿತಿಯಿದ್ದಕಾರಣ ಸ್ವಲ್ಪವೂ ಅಲುಗಾಡಿಸಲು ಸಾಧ್ಯವಾಗಲಿಲ್ಲ. ಇದಕ್ಕೇ ನಿರ್ಮಾಣ ಮತ್ತು ಅಧಿಕಾರದ ಸಮಾನತೆ ಹೇಳುತ್ತಾರೆ. ಇದರ ಫಲಿತಾಂಶವನ್ನು ತಾವೆಲ್ಲರೂ ನೋಡುತ್ತಿದ್ದೀರಿ. ನಿಂದೆ ಮಾಡುವವರೂ ಸಹ ಬ್ಯಾಲೆನ್ಸ್ ಮನಸ್ಸಿನಿಂದ ಮುಂದೆ ಬಾಗುತ್ತಿದ್ದಾರೆ. ಆದ್ದರಿಂದ- ಸೇವೆಯ ಸಫಲತೆಗೆ ವಿಶೇಷ ಆಧಾರ ನಿರ್ಮಾಣ ಭಾವನೆ, ನಿಮಿತ್ತ ಭಾವನೆ, ಬೇಹದ್ ಭಾವನೆ. ಈ ವಿಧಿಯಿಂದಲೇ ಸಿದ್ಧಿ ಸ್ವರೂಪರಾದರು.

5. ಐದನೇ ಹೆಜ್ಜೆ - ಕರ್ಮಬಂಧನಮುಕ್ತ-ಕರ್ಮಸಂಬಂಧಮುಕ್ತ ಅರ್ಥಾತ್ ಶರೀರದ ಬಂಧನದಿಂದ ಮುಕ್ತ ಫರಿಶ್ತಾ ಅರ್ಥಾತ್ ಕರ್ಮಾತೀತ. ಸೆಕೆಂಡಿನಲ್ಲಿ ನಷ್ಟಮೋಹ ಸ್ಮೃತಿಸ್ವರೂಪ ಸಮೀಪ ಮತ್ತು ಸಮಾನರಾದರು.

ಅಂದಾಗ ಇಂದು ವಿಶೇಷ ಸಂಕ್ಷಿಪ್ತವಾಗಿ ಐದು ಹೆಜ್ಜೆಗಳನ್ನು ತಿಳಿಸಿದೆವು. ವಿಸ್ತಾರವಂತೂ ಬಹಳಷ್ಟಿದೆ ಆದರೆ ಸಾರ ರೂಪದಲ್ಲಿ ಈ ಐದು ಹೆಜ್ಜೆಗಳ ಮೇಲೆ ಹೆಜ್ಜೆಯನ್ನು ಇಡುವವರಿಗೇ ಫಾಲೋಫಾದರ್ ಎಂದು ಹೇಳಲಾಗುತ್ತದೆ. ಈಗ ತಮ್ಮೊಂದಿಗೆ ಕೇಳಿಕೊಳ್ಳಿ- ಎಷ್ಟು ಹೆಜ್ಜೆಗಳಲ್ಲಿ ಫಾಲೋ ಮಾಡಿದ್ದೀರಿ? ಸಮರ್ಪಿತರಾಗಿದ್ದೀರಾ ಅಥವಾ ಸರ್ವಾಂಶಸಹಿತ ಸಮರ್ಪಿತರಾಗಿದ್ದೀರಾ? ಸರ್ವವಂಶ ಅರ್ಥಾತ್ ಸಂಕಲ್ಪ, ಸ್ವಭಾವ ಮತ್ತು ಸಂಸ್ಕಾರ. ಗುಣದಲ್ಲಿಯೂ ತಂದೆಯ ಸಮಾನವಿರಬೇಕು. ಒಂದುವೇಳೆ ಇಲ್ಲಿಯವರೆಗೂ ನಡೆಯುತ್ತಾ- ನಡೆಯುತ್ತಾ ಈ ರೀತಿ ತಿಳಿದುಕೊಳ್ಳುತ್ತೀರಿ ಮತ್ತು ನನ್ನ ಸ್ವಭಾವವೇ ಹೀಗಿದೆ. ನನ್ನ ಗುಣವೇ ಹೀಗಿದೆ ಅಥವಾ ಬಯಸದಿದ್ದರೂ ಸಂಕಲ್ಪ ಬಂದುಬಿಡುತ್ತದೆ, ಮಾತುಗಳು ಬಂದುಬಿಡುತ್ತವೆ ಎಂದು ಹೇಳುತ್ತೀರೆಂದರೆ ಇದಕ್ಕೆ ಸರ್ವಸ್ವತ್ಯಾಗಿಗಳೆಂದು ಹೇಳುವುದಿಲ್ಲ. ತಮ್ಮನ್ನು ಸಮರ್ಪಿತರೆಂದು ಹೇಳಿಕೊಳ್ಳುತ್ತೀರಿ ಆದರೆ ಸರ್ವಂಶ ಸಮರ್ಪಣೆಯೆಂದರೆ ಇದರಲ್ಲಿ ನನ್ನದು ಎಂಬುದೆಲ್ಲವೂ ನಿನ್ನದಾಗಿಬಿಡುತ್ತದೆ. ಯಾವುದು ತಂದೆಯ ಸ್ವಭಾವವೋ ಅದು ಸ್ವಯಂನ ಭಾವ ಅರ್ಥಾತ್ ಆತ್ಮೀಕಭಾವ. ಸಂಸ್ಕಾರವು ಸದಾ ತಂದೆಯ ಸಮಾನ ಸ್ನೇಹ, ದಯೆ, ಉದಾರಹೃದಯಿಯಾಗಿರಲಿ. ಇದನ್ನೇ ವಿಶಾಲಹೃದಯವೆಂದು ಹೇಳುತ್ತಾರೆ. **ಸಂಕುಚಿತ ಹೃದಯ ಅರ್ಥಾತ್ ಮಿತವಾದ ನನ್ನತನವನ್ನು ನೋಡುವುದು – ಭಲೆ ತನ್ನಪ್ರತಿ, ತನ್ನ ಸೇವಾಸ್ಥಾನಗಳಪ್ರತಿ, ತನ್ನ ಸೇವಾ ಜೊತೆಗಾರರಪ್ರತಿ ಎಲ್ಲದರಲ್ಲಿ ಹದ್ದಿನ(ಮಿತಿ) ಭಾವನೆ ಮತ್ತು ವಿಶಾಲ ಹೃದಯವೆಂದರೆ ಎಲ್ಲರೂ ನನ್ನವರೇ ಎಂಬ ಅನುಭವವಾಗುವುದು ವಿಶಾಲಹೃದಯದವರಲ್ಲಿ ಸದಾ ಪ್ರತಿಯೊಂದು ಕಾರ್ಯ ಅಂದರೆ ತನುವಿನ, ಮನಸ್ಸಿನ, ಧನದ ಅಥವಾ**

ಸಂಬಂಧದಲ್ಲಿ ಸಫಲತೆಯ ವೃದ್ಧಿ ಇರುತ್ತದೆ. ವೃದ್ಧಿ ಅರ್ಥಾತ್ ಹೆಚ್ಚು ಲಾಭವಾಗುತ್ತದೆ. ಸಂಕುಚಿತ ಹೃದಯದವರಿಗೆ ಪರಿಶ್ರಮ ಹೆಚ್ಚು ಮತ್ತು ಸಫಲತೆ ಕಡಿಮೆಯಾಗುತ್ತದೆ. ಮೊದಲೂ ತಿಳಿಸಿದ್ದೆವು- ಸಂಕುಚಿತ ಹೃದಯದವರ ಭಂಡಾರ ಮತ್ತು ಭಂಡಾರಿ ಸದಾ ಸಂಪನ್ನವಾಗಿ ಇರುವುದಿಲ್ಲ. ಸೇವಾ ಜೊತೆಗಾರರು ಕೇವಲ ಭರವಸೆ ಕೊಡುವವರು ಆಗಿರುತ್ತಾರೆ- ತಾವು ಇದನ್ನು ಮಾಡಿ, ನಾವೂ ಸಹಯೋಗ ನೀಡುತ್ತೇವೆ ಎಂದು, ಆದರೆ ಸಮಯದಲ್ಲಿ ತಮ್ಮದೇ ಪರಿಸ್ಥಿತಿಗಳನ್ನು ಹೇಳಲು ಆರಂಭಿಸುತ್ತಾರೆ. ಆದ್ದರಿಂದಲೇ ಹೇಳಲಾಗುತ್ತದೆ. ವಿಶಾಲ (ದೊಡ್ಡ)ಹೃದಯದವರಿಗೆ ದೊಡ್ಡ  ಸಾಹೇಬನು ರಾಜಿಯಾಗುವರು. ರಹಸ್ಯಯುಕ್ತರ ಮೇಲೆ ಸಾಹೇಬ ತಂದೆಯೂ ಸದಾ ರಾಜಿಯಾಗುತ್ತಾರೆ. ಎಲ್ಲಾ ಟೀಚರ್ಸ್ ವಿಶಾಲಹೃದಯಿಗಳಾಗಿದ್ದೀರಿ ಅಲ್ಲವೆ. ಬೇಹದ್ದಿನ ಉನ್ನತೋನ್ನತ ಕಾರ್ಯಕ್ಕಾಗಿಯೇ ನಿಮಿತ್ತರಾಗಿದ್ದೀರಿ. ನಾವು ಇಷ್ಟು ಪ್ರಾಂತ್ಯಕ್ಕೆ ಕಲ್ಯಾಣಕಾರಿಗಳಾಗಿದ್ದೇವೆ ಅಥವಾ ಇಂತಹ ದೇಶದ ಕಲ್ಯಾಣಕಾರಿಗಳಾಗಿದ್ದೇವೆ ಎಂದು ಹೇಳುತ್ತಿಲ್ಲ ತಾನೇ? ಇಷ್ಟು ವಿಶಾಲ ಕಾರ್ಯಕ್ಕಾಗಿ ಹೃದಯವು ವಿಶಾಲವಾಗಿ ಇರಬೇಕಲ್ಲವೇ! ದೊಡ್ಡ ಹೃದಯ ಎಂದರೆ ಬೇಹದ್ ಹೃದಯ ನಮಗೆ ಎಲ್ಲೆಯನ್ನು(ಸೇವಾಕೇಂದ್ರ) ತಯಾರು ಮಾಡಿಕೊಟ್ಟಿದ್ದಾರೆ ಎಂದು ಟೀಚರ್ಸ್ ಹೇಳುತ್ತಿದ್ದೀರಾ? ನಿಮಗೆ ಎಲ್ಲೆಯನ್ನು ಏಕೆ ಮಾಡಿಕೊಡಲಾಗಿದೆ. ಅದಕ್ಕೆ ಕಾರಣವೇನು? ಸಣ್ಣ ಹೃದಯ. ಎಷ್ಟಾದರೂ ಪ್ರಾಂತ್ಯಗಳನ್ನು ವಿಂಗಡಿಸಿಕೊಡಲಿ ಆದರೆ ತಾವು ಸದಾ ಬೇಹದ್ದಿನ ಭಾವವನ್ನು ಇಟ್ಟುಕೊಳ್ಳಿ. ಹೃದಯದಲ್ಲಿ ಮಿತಭಾವನೆ ಇಟ್ಟುಕೊಳ್ಳಬೇಡಿ. ಸ್ಥಾನದ ಹದ್ದಿನ ಪ್ರಭಾವವು ಹೃದಯದಲ್ಲಿ ಇರಬಾರದು. ಒಂದುವೇಳೆ ಹೃದಯದಲ್ಲಿ ಹದ್ದಿನ ಪ್ರಭಾವವಿದ್ದರೆ ಬೇಹದ್ದಿನ ತಂದೆಯೂ ಹದ್ದಿನ ಹೃದಯದಲ್ಲಿರಲು ಸಾಧ್ಯವಿಲ್ಲ. ತಂದೆಯು ದೊಡ್ಡವರಾಗಿದ್ದಾರೆ ಅಂದಮೇಲೆ ದೊಡ್ಡ ಹೃದಯವೇ ಬೇಕಲ್ಲವೆ. ಬ್ರಹ್ಮಾತಂದೆಯು ಎಂದಾದರೂ ಮಧುಬನದಲ್ಲಿ ಇರುತ್ತಾ ನನ್ನದು ಕೇವಲ ಮಧುಬನವಾಗಿದೆ, ಬಾಕಿ ಪಂಜಾಬ್, ಯು.ಪಿ.. ಕರ್ನಾಟಕ ಇತ್ಯಾದಿ ಮಕ್ಕಳದಾಗಿದೆ ಎಂದು ಸಂಕಲ್ಪ ಮಾಡಿದರೇ? ಬ್ರಹ್ಮಾತಂದೆಯೊಂದಿಗೆ ಎಲ್ಲರಿಗೂ ಪ್ರೀತಿಯಿದೆಯಲ್ಲವೆ. ಪ್ರೀತಿಯ ಅರ್ಥವಾಗಿದೆ- ಫಾಲೋ ಮಾಡುವುದು.

ಎಲ್ಲಾ ಟೀಚರ್ಸ್ ತಂದೆಯನ್ನು ಅನುಸರಿಸುವವರಾಗಿದ್ದೀರಾ ಅಥವಾ ನನ್ನ ಸೆಂಟರ್ ನನ್ನ ಜಿಜ್ಞಾಸುಗಳು, ನನ್ನ ವಸ್ತುಗಳು ಮತ್ತು ನನ್ನ ಸಹಯೋಗಿಗಳೆಂದು ತಿಳಿಯುತ್ತೀರಾ ಮತ್ತು ವಿದ್ಯಾರ್ಥಿಗಳೂ ಸಹ ಇವರು ನಮ್ಮ ಟೀಚರ್ ಎಂದು ತಿಳಿಯುತ್ತೀರಾ! ಫಾಲೋಫಾದರ್ ಎಂದರೆ ನನ್ನದು ಎಂಬುದನ್ನು ನಿನ್ನದರಲ್ಲಿ ಸಮಾವೇಶ ಮಾಡುವುದು. ಹದ್ದನ್ನು ಬೇಹದ್ದಿನಲ್ಲಿ ಸಮಾವೇಶ ಮಾಡಿಬಿಡಿ ಈಗ ಈ ಹೆಜ್ಜೆಯ ಮೇಲೆ ಹೆಜ್ಜೆಯನ್ನಿಡುವ ಅವಶ್ಯಕತೆಯಿದೆ. ಎಲ್ಲರ ಸಂಕಲ್ಪ, ಮಾತು, ಸೇವೆಯ ವಿಧಿ. ಬೇಹದ್ದಿನ ಅನುಭವವಾಗಲಿ. ಈ ವರ್ಷ ಏನು ಮಾಡಬೇಕೆಂದು ಕೇಳುತ್ತೀರಲ್ಲವೆ ಆದ್ದರಿಂದ ಸ್ವಪರಿವರ್ತನೆಗಾಗಿ ಮಿತಭಾವವನ್ನು ಸರ್ವವಂಶಸಹಿತ ಸಮಾಪ್ತಿ ಮಾಡಿರಿ. ಯಾರನ್ನೇ ನೋಡಿರಿ ಅಥವಾ ಯಾರಾದರೂ ತಮ್ಮನ್ನು ನೋಡಲಿ ಅವರಿಗೆ ಬೇಹದ್ದಿನ ಸಾಮ್ರಾಜ್ಯದ ನಶೆಯ ಅನುಭವವಾಗಲಿ. **ಸಂಕುಚಿತ ಹೃದಯದವರು ಬೇಹದ್ದಿನ ಸಾಮ್ರಾಟರಾಗಲು ಸಾಧ್ಯವಿಲ್ಲ. ಎಷ್ಟು ಸೇವಾಕೇಂದ್ರಗಳನ್ನು ತೆರೆಯುತ್ತಾರೆಯೋ ಅಥವಾ ಎಷ್ಟು ಹೆಚ್ಚು ಸೇವೆ ಮಾಡುವರೋ ಅಷ್ಟು ದೊಡ್ಡರಾಜರಾಗುವರು ಎಂದು ತಿಳಿದುಕೊಳ್ಳಬೇಡಿ. ಇದರಮೇಲೆ ಸ್ವರ್ಗದ ಬಹುಮಾನ ಸಿಗುವುದಿಲ್ಲ. ಸೇವೆಯೂ ಆಗಲಿ, ಸೇವಾಕೇಂದ್ರಗಳೂ ಆಗಲಿ ಆದರೆ ಹದ್ದಿನ ಹೆಸರು, ಗುರುತೂ ಇರಬಾರದು. ಅಂತಹವರಿಗೆ ನಂಬರ್‌ವಾರ್ ವಿಶ್ವದ ರಾಜ್ಯಸಿಂಹಾಸನವು ಪ್ರಾಪ್ತವಾಗುವುದು. ಆದ್ದರಿಂದ ಈಗೀಗ ಸ್ವಲ್ಪಸಮಯಕ್ಕಾಗಿ ತಮ್ಮ ಹೃದಯವನ್ನು ಖುಷಿಪಡಿಸಿಕೊಂಡು ಕುಳಿತುಕೊಳ್ಳಬೇಡಿ. ಬೇಹದ್ದಿನ ಸುಗಂಧವನ್ನು ಬೀರುವವರು ಈಗಲೂ ತಂದೆಯ ಸಮಾನ ಮತ್ತು ಸಮೀಪ ಇರುತ್ತಾರೆ ಮತ್ತು 21 ಜನ್ಮಗಳೂ ಬ್ರಹ್ಮಾತಂದೆಯ ಸಮೀಪ ಇರುತ್ತಾರೆ. ಅಂದಮೇಲೆ ಇಂತಹ ಬಹುಮಾನ ಬೇಕೋ, ಈಗಿನ ಬಹುಮಾನ ಬೇಕೋ? ಬಹಳ ಸೇವಾಕೇಂದ್ರಗಳಿವೆ. ಬಹಳ ಜಿಜ್ಞಾಸುಗಳಿದ್ದರೆ, ಈ ಬಹಳ-ಬಹಳ ಎನ್ನುವುದರಲ್ಲಿ ಹೋಗಬೇಡಿ. ದೊಡ್ಡ ಹೃದಯವನ್ನಾಗಿ ಮಾಡಿಕೊಳ್ಳಿ.** ಈ ವರ್ಷ ಏನು ಮಾಡಬೇಕು ಎಂಬುದನ್ನು ಕೇಳಿಸಿಕೊಂಡಿರಾ? ಈ ವರ್ಷ ಸ್ವಪ್ನದಲ್ಲಿಯೂ ಯಾರದೇ ಹದ್ದಿನ ಸಂಸ್ಕಾರವು ಉತ್ಪನ್ನವಾಗದಿರಲಿ. ಈ ಸಾಹಸವಿದೆಯಲ್ಲವೆ? ಒಬ್ಬರು ಇನ್ನೊಬ್ಬರನ್ನು ಫಾಲೋ ಮಾಡಬೇಡಿ. ತಂದೆಯನ್ನು ಫಾಲೋ ಮಾಡಿ.

ಎರಡನೇ ಮಾತೇನೆಂದರೆ – ಬಾಪ್ ದಾದಾ ವಾಣಿಯ ಮೇಲೆ ವಿಶೇಷ ಗಮನ ತರಿಸಿದ್ದೆವು ಈ ವರ್ಷ ತಮ್ಮ ಮಾತಿನ ಮೇಲೆ ವಿಶೇಷ ಡಬಲ್ ಗಮನ ಇಟ್ಟುಕೊಳ್ಳಿ . ಎಲ್ಲರಿಗೆ ಮಾತಿಗಾಗಿ ಸೂಚನಾ ಪಟ್ಟಿಯನ್ನು ಕಳುಹಿಸಲಾಗಿದೆ. ಯಾರು ಇದನ್ನು ಅವಡಿಸಿಕೊಳ್ಳುವರೋ ಅವರಿಗೇ ಬಹುಮಾನ ಸಿಗುವುದು. ಸತ್ಯತೆ- ಸ್ವಚ್ಛತೆಯಿಂದ ತಮ್ಮ ಚಾರ್ಟನ್ನು ಸ್ವಯಂ ಇಟ್ಟುಕೊಳ್ಳಿ . ಸತ್ಯ ತಂದೆಯ ಮಕ್ಕಳಾಗಿದ್ದೀರಲ್ಲವೇ ಬಾಪ್ ದಾದ ಎಲ್ಲರಿಗೂ ಸೂಚನೆಯನ್ನು ನೀಡುತ್ತಾರೆ. ಎಲ್ಲಿಯಾದರೂ ಸೇವೆಯು ಸ್ಥಿತಿಯನ್ನು ಏರುಪೇರು ಮಾಡುತ್ತಿದೆ ಎಂದರೆ ಅವರಿಗೆ ಸೇವೆಯಲ್ಲಿ ಯಾವುದೇ ಸಫಲತೆ ಸಿಗಲು ಸಾಧ್ಯವಿಲ್ಲ. ಭಲೆ ಸೇವೆಯನ್ನು ಕಡಿಮೆ ಮಾಡಿರಿ ಆದರೆ ಸ್ಥಿತಿಯನ್ನು ಕಡಿಮೆ ಮಾಡಿಕೊಳ್ಳಬೇಡಿ. ಯಾವ ಸೇವೆಯು ಸ್ಥಿತಿಯನ್ನು ಕೆಳಗೆ ತರುತ್ತದೆಯೋ ಅದಕ್ಕೆ ಸೇವೆಯೆಂದು ಹೇಗೆ ಹೇಳುವಿರಿ! ಆದ್ದರಿಂದ ಬಾಪ್‌ದಾದಾ ಪುನಃ ಎಲ್ಲರಿಗೆ ಇದನ್ನೇ ಹೇಳುತ್ತೇವೆ- ಸದಾ ಸ್ವಸ್ಥಿತಿ ಮತ್ತು ಸೇವೆ ಅರ್ಥಾತ್ ಸ್ವ-ಸೇವೆ ಮತ್ತು ಅನ್ಯರ ಸೇವೆಯನ್ನು ಜೊತೆಜೊತೆಯಲ್ಲಿ ಸದಾ ಮಾಡಿರಿ. ಸ್ವ-ಸೇವೆಯನ್ನು ಬಿಟ್ಟು ಪರಸೇವೆ ಮಾಡುವುದರಿಂದ ಸಫಲತೆ ಪ್ರಾಪ್ತಿಯಾಗುವುದಿಲ್ಲ. ಸ್ವ-ಸೇವೆ ಮತ್ತು ಪರಸೇವೆಯ ಸಾಹಸವನ್ನಿಟ್ಟುಕೊಳ್ಳಿ. ಸರ್ವಶಕ್ತಿವಂತ ತಂದೆಯೇ ಜೊತೆಗಾರನಾಗಿದ್ದಾರೆ ಆದ್ದರಿಂದ ಸಾಹಸದಿಂದ ಎರಡರ ಬ್ಯಾಲೆನ್ಸ್ ಇಟ್ಟುಕೊಂಡು ಮುಂದೆ ನಡೆಯಿರಿ, ಬಲಹೀನರಾಗಬೇಡಿ. ಅನೇಕಬಾರಿ ನಿಮಿತ್ತರಾಗಿರುವ ವಿಜಯೀ ಆತ್ಮರಾಗಿದ್ದೀರಿ. ಇಂತಹ ವಿಜಯೀ ಆತ್ಮರಿಗಾಗಿ ಯಾವುದೂ ಕಷ್ಟವಲ್ಲ. ಯಾವುದೇ ಪರಿಶ್ರಮವಿಲ್ಲ. ಗಮನ ಮತ್ತು ಅಭ್ಯಾಸ – ಇದನ್ನು ಸಹಜ ಮತ್ತು ಸ್ವತಹ ಅನುಭವ ಮಾಡುತ್ತೀರಿ. ಅಟೆನ್ಶನ್‌ನ ಟೆನ್ಶನ್ ಇಟ್ಟುಕೊಳ್ಳಬೇಡಿ. ಕೆಲಕೆಲವರು ಆಟೆನ್ಶನ್‌ನ್ನು ಟೆನ್ಶನ್‌ನಲ್ಲಿ ಬದಲಾಯಿಸುತ್ತಾರೆ. ಬ್ರಾಹ್ಮಣ ಆತ್ಮರ ನಿಜಸಂಸ್ಕಾರವೇ "ಅಟೆನ್ಸನ್ ಮತ್ತು ಅಭ್ಯಾಸ" ವಾಗಿದೆ. ಒಳ್ಳೆಯದು!

ಬಾಕಿ ವಿಶ್ವಕಲ್ಯಾಣದ ಸೇವೆಯ ಮಾತು ಉಳಿಯಿತು ಅಂದಾಗ ಈ ವರ್ಷ ಪ್ರತಿಯೊಂದು ಸೇವಾಕೇಂದ್ರದವರು ಯಾರೆಲ್ಲಾ ಸಂಬಂಧ-ಸಂಪರ್ಕದವರಿದ್ದಾರೆಯೋ ಅವರಿಗೆ ನಿಮಂತ್ರಣಕೊಟ್ಟು ಯಥಾಶಕ್ತಿ ಸ್ನೇಹ ಮಿಲನ ಮಾಡಿ. ವರ್ಗೀಕರಣದ ಲೆಕ್ಕದಿಂದಾದರೂ ಮಾಡಿ ಅಥವಾ ಸಿಕ್ಕಿರುವ ಸೇವೆಯನ್ನಾದರೂ ಮಾಡಿ ಆದರೆ ಆ ಆತ್ಮರ ಕಡೆ ವಿಶೇಷ ಗಮನವಿಡಿ ವೈಯಕ್ತಿಕವಾಗಿ ಮಿಲನ ಮಾಡಿರಿ. ಕೇವಲ ಅಂಚೆಯನ್ನು ಕಳುಹಿಸುತ್ತೀರಿ ಅದರಿಂದಲೂ ಫಲಿತಾಂಶವು ಕಡಿಮೆಯಾಗುತ್ತದೆ. ತಮ್ಮಲ್ಲಿ ಬರುವಂತಹ ವಿದ್ಯಾರ್ಥಿಗಳ ಗುಂಪುಗಳನ್ನೂ ಮಾಡಿ ಮತ್ತು ಅವರಲ್ಲಿ ಕೆಲವರನ್ನು ವ್ಯಕ್ತಿಗತವಾಗಿ ಸಮೀಪ ಬರಲು ನಿಮಿತ್ತರನ್ನಾಗಿ ಮಾಡಿರಿ ಆಗ ಎಲ್ಲಾ ವಿದ್ಯಾರ್ಥಿಗಳು ಬ್ಯುಜಿಯಾಗುತ್ತಾರೆ ಮತ್ತು ಸೇವೆಯ ಆಯ್ಕೆಯೂ ಆಗಿಬಿಡುವುದು. ಯಾರಿಗೆ ತಾವು ಆಧಾರವಿಲ್ಲದವರು ಎಂದು ಹೇಳುತ್ತೀರಿ. ಅಂತಹ ಆತ್ಮರಿಗೂ ಯಾವುದಾದರೂ ಹೊಸ ಮಾತನ್ನು ತಿಳಿಸಬೇಕಾಗಿದೆ. ಇಲ್ಲಿಯವರೆಗೂ ಸ್ವರ್ಗವು ಹೇಗಿರುತ್ತದೆ ಅದರ ದೃಶ್ಯಗಳನ್ನು ಒಟ್ಟುಗೂಡಿಸಿದ್ದೀರಿ. ಈಗ ಅವರಿಗೆ ತಮ್ಮಕಡೆ ಗಮನ ತರಿಸಿ ಅದರ ವಿಶೇಷ ಟಾಪಿಕ್ ಇಡಿ - "ಸೆಲ್ಫ್ ಪ್ರೊಗ್ರೆಸ್" (ಸ್ವ-ಉನ್ನತಿ) ಮತ್ತು "ಸೆಲ್ಫ್ ಪ್ರೊಗ್ರೆಸ್‌ನ ಆಧಾರ" (ಸ್ವ- ಉನ್ನತಿಗೆ ಆಧಾರ) - ಈ ಹೊಸ ವಿಷಯವನ್ನು ಇಡಿ. ಈ ಸ್ವ-ಉನ್ನತಿಗಾಗಿ ಆಧ್ಯಾತ್ಮಿಕ ಬಜೆಟ್ ಮಾಡಿಕೊಳ್ಳಿ ಮತ್ತು ಬಜೆಟ್‌ನಲ್ಲಿ ಸದಾ ಬಚತ್ (ಉಳಿತಾಯ ಖಾತೆ)ನ ಸ್ಕೀಮ್ ಮಾಡಲಾಗುತ್ತದೆ. ಅಂದಮೇಲೆ ಆಧ್ಯಾತ್ಮಿಕ ಉಳಿತಾಯದ ಖಾತೆಯು ಯಾವುದಾಗಿದೆ! ಸಮಯ. ಮಾತು, ಸಂಕಲ್ಪ ಮತ್ತು ಶಕ್ತಿಯನ್ನು ವ್ಯರ್ಥದಿಂದ ಸಮರ್ಥದಲ್ಲಿ ಪರಿವರ್ತನೆ ಮಾಡಿಕೊಳ್ಳಬೇಕಾಗುವುದು. ಎಲ್ಲರಿಗೆ ಈಗ ಸ್ವಯಂನ ಕಡೆ ಗಮನ ತರಿಸಿ. ಮಕ್ಕಳು ಟಾಪಿಕ್ ಇಟ್ಟಿದ್ದರು - "ಫಾರ್ ಸೆಲ್ಫ್ ಟ್ರಾನ್ಸ್‌ಫಾರ್ಮೇಶನ್" (ಸ್ವ-ಪರಿವರ್ತನೆಗಾಗಿ) ಆದರೆ ಈ ವರ್ಷ ಪ್ರತಿಯೊಂದು ಸೇವಾಕೇಂದ್ರಕ್ಕೆ ಸ್ವಾತಂತ್ರವಿದೆ, ಯಾರೆಷ್ಟಾದರೂ ಮಾಡಬಹುದು. ತಮ್ಮ ಸ್ವ-ಉನ್ನತಿಯ ಜೊತೆಜೊತೆಗೆ ಸ್ವಾತಂತ್ರವೂಇದೆ. ಈ ವಿಷಯವನ್ನು ಅನುಭವ ಮಾಡಿಕೊಳ್ಳಿ ಮತ್ತು ಸೇವೆಯಲ್ಲಿ ಅನ್ಯರಿಗೆ ಈ ಮಾತಿನ ಅನುಭವ ಮಾಡಿಸಿರಿ. ಒಂದುವೇಳೆ ಯಾರಾದರೂ ವಿಶಾಲ ಕಾರ್ಯಕ್ರಮವನ್ನು ಇಡುತ್ತೀರೆಂದರ ಅನುಭವ ಒಂದುವೇಳೆ ಆಗದಿದ್ದರೆ ಭಲೆ ಚಿಕ್ಕ ಕಾರ್ಯಕ್ರಮಗಳನ್ನೇ ಮಾಡಿರಿ ಆದರೆ ವಿಶೇಷ ಗಮನವೇನೆಂದರೆ ಸ್ವಸೇವೆ ಮತ್ತು ಪರಸೇವೆಯ ಬ್ಯಾಲೆನ್ಸ್ ಹಾಗೂ ವಿಶ್ವಸೇವೆಯ ಬ್ಯಾಲೇನ್ಸ್ ಇರಲಿ, ಸೇವೆಯಲ್ಲಿ ನಿರತರಾಗಿ ಸ್ವ-ಉನ್ನತಿಗೆ ಸಮಯವೇ ಸಿಗದಂತೆ ಮಾಡಿಕೊಳ್ಳಬೇಡಿ. ಸೇವೆಗಾಗಿ ಇದು ಸ್ವತಂತ್ರ ವರ್ಷವಾಗಿದೆ. ಯಾರೆಷ್ಟು ಬೇಕೋ ಅಷ್ಟು ಮಾಡಿರಿ. ಎರಡೂ ಯೋಜನೆಗಳನ್ನೂ

ಸ್ಮೃತಿಯಲ್ಲಿ ಇಟ್ಟುಕೊಂಡು ಅದಕ್ಕೆ ಇನ್ನೂ ಯೋಜನೆಗಳನ್ನು ಜೋಡಿಸಬಹುದು. ತಂದೆ ಸದಾ ಮಕ್ಕಳನ್ನು ಮುಂದೆ ಇಡುತ್ತಾರೆ. ಒಳ್ಳೆಯದು-

**ನಾಲ್ಕಾರು ಕಡೆಯ ಸರ್ವಘಾಲೋಘಾದರ್ ಮಾಡುವಂತಹ ಶ್ರೇಷ್ಠ ಆತ್ಮರಿಗೆ, ಸದಾ ಡಬಲ್ ಸೇವೆಯ ಬ್ಯಾಲೆನ್ಸ್ ಇಟ್ಟುಕೊಂಡು ತಂದೆಯ ಆಶೀರ್ವಾದ ಪಡೆದಿರುವ ಆತ್ಮರಿಗೆ, ಸದಾ ಬೇಹದ್ದಿನ ಚಕ್ರವರ್ತಿಗಳಿಗೆ, ಇಂತಹ ರಾಜಯೋಗಿ. ಸಹಜಯೋಗಿ, ಸ್ವತಹಯೋಗಿ. ಸದಾ ಅನೇಕ ಬಾರಿಯ ವಿಜಯದ ನಿಶ್ಚಯ ಮತ್ತು ನಶೆಯಲ್ಲಿರುವಂತಹ ಅತಿಸ್ನೇಹಿ, ಸಹಯೋಗಿ ಮಕ್ಕಳಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

**ಅವ್ಯಕ್ತ ಬಾಪ್‌ದಾದಾರವರೊಂದಿಗೆ ವ್ಯಕ್ತಿಗತ ವಾರ್ತಾಲಾಪ**:- ನಾನು ಪ್ರತೀ ಕಲ್ಪದ ಪೂಜ್ಯಾತ್ಮನಾಗಿದ್ದೇನೆ ಎಂಬ ಅನುಭವ ಮಾಡುತ್ತೀರಾ? ಅನೇಕ ಬಾರಿ ಪೂಜ್ಯರಾಗಿದ್ದೀರಿ. ಪುನಃ ಪೂಜ್ಯರಾಗುತ್ತಿದ್ದೀರಿ! ಪೂಜ್ಯಾತ್ಮರು ಯಾರಾಗುವರು? ಏಕೆಂದರೆ ಯಾರು ಸ್ವಮಾನದಲ್ಲಿ ಇರುತ್ತಾರೆಯೋ ಅವರಿಗೆ ಸ್ವತಹವಾಗಿಯೇ ಅನ್ಯರ ಮೂಲಕ ಗೌರವ ಸಿಗುವುದು. ಸ್ವಮಾನವನ್ನು ತಿಳಿದಿದ್ದೀರಾ? ಎಷ್ಟು ಶ್ರೇಷ್ಠ ಸ್ವಮಾನವಿದೆ? ಯಾರೆಷ್ಟಾದರೂ ಶ್ರೇಷ್ಠ ಸ್ವಮಾನದವರಿರಲಿ ಆದರೆ ತಮ್ಮ ಮುಂದೆ ಅದೇನೂ ಅಲ್ಲ ಏಕೆಂದರೆ ಅವರ ಸ್ವಮಾನವು ಅಲ್ಪಕಾಲದ್ದಾಗಿದೆ ಮತ್ತು ತಮ್ಮದು ಆತ್ಮಿಕ ಸ್ವಮಾನವಾಗಿದೆ. ಆತ್ಮವು ಅವಿನಾಶಿ ಆಗಿದೆ. ಸ್ವಮಾನವೂ ಅವಿನಾಶಿಯಾಗಿದೆ. ಅವರಿಗೆ ದೇಹದ ಮಾನ್ಯತೆಯಿದೆ. ದೇಹವು ವಿನಾಶಿ ಅಂದಮೇಲೆ ಸ್ವಮಾನವೂ ವಿನಾಶಿಯಾದುದು. ಯಾವಾಗ ಯಾರು ಅಧ್ಯಕ್ಷರಾಗುತ್ತಾರೆ ಅಥವಾ ಮಂತ್ರಿಯಾಗುತ್ತಾರೆ ಆದರೆ ಶರೀರ ಬಿಡುತ್ತಾರೆಂದರೆ ಸ್ವಮಾನವೂ ಹೊರಟುಹೋಗುವುದು. ಮತ್ತೇನಾದರೂ ಅಧ್ಯಕ್ಷರಾಗುವರೇ? ಮತ್ತು ತಮ್ಮ ಸ್ವಮಾನವೇನಿದೆ? ಶ್ರೇಷ್ಠ ಆತ್ಮ, ಪೂಜ್ಯಾತ್ಮರಾಗಿದ್ದೀರಿ. ಆತ್ಮದ ಸ್ಮೃತಿಯಲ್ಲಿ ಇರುತ್ತೀರಿ ಆದ್ದರಿಂದ ಅವಿನಾಶಿ ಸ್ವಮಾನವಾಗಿದೆ. ತಾವು ವಿನಾಶಿ ಸ್ವಮಾನದ ಕಡೆ ಆಕರ್ಷಿತರಾಗಲು ಸಾಧ್ಯವಿಲ್ಲ. ಅವಿನಾಶಿ ಸ್ವಮಾನದವರು ಪೂಜ್ಯಾತ್ಯನಾಗುವರು. ಈಗಿನವರೆಗೆ ತಮ್ಮ ಪೂಜೆಯನ್ನು ನೋಡುತ್ತಿದ್ದೀರಿ, ಯಾವಾಗ ತಮ್ಮ ಪೂಜ್ಯ ಸ್ವರೂಪವನ್ನು ನೋಡುತ್ತೀರಿ ಆಗ ಸ್ಮೃತಿ ಬರುತ್ತದೆಯಲ್ಲವೆ- ಇದು ನಮ್ಮದೇ ರೂಪವಾಗಿದೆ. ಭಲೆ ಭಕ್ತರು ತನ್ನ ತನ್ನ ಭಾವನೆಯಿಂದ ರೂಪವನ್ನು ಕೊಟ್ಟಿರಬಹುದು ಆದರೆ ತಾವೇ ಪೂಜ್ಯಾತ್ಮರಾಗಿದ್ದೀರಿ. ಸ್ವಮಾನವೆಷ್ಟಿದೆಯೋ ಅಷ್ಟೇ ನಿರ್ಮಾಣತೆ, ಸ್ವಮಾನದ ಅಭಿಮಾನವೂ ಇಲ್ಲ. ಆದರೆ ಈ ರೀತಿಯಾಗಬಾರದು- ನಾವಂತು ಶ್ರೇಷ್ಠರಾದೆವು, ಅನ್ಯರು ಚಿಕ್ಕವರು ಅಥವಾ ಅವರ ಬಗ್ಗೆ ತಿರಸ್ಕಾರ ಭಾವವಾಗಬಾರದು. ಯಾರೆಂತಹ ಆತ್ಮರೇ ಆಗಿರಲಿ ಆದರೆ ದಯಾ ದೃಷ್ಟಿಯಿಂದ ನೋಡಬೇಕು. ಅಭಿಮಾನದ ದೃಷ್ಟಿಯಿಂದಲ್ಲ, ಅಭಿಮಾನವೂ ಇರಬಾರದು, ಅಪಮಾನವೂ ಇರಬಾರದು. ಈಗ ಬ್ರಾಹ್ಮಣ ಜೀವನದಲ್ಲಿ ಈ ಚಲನೆಯಿರಬಾರದು. ಅಂದಮೇಲೆ ದೃಷ್ಟಿಯು ಬದಲಾಯಿತಲ್ಲವೆ ಈಗ ಜೀವನವೇ ಬದಲಾಯಿತೆಂದ ಮೇಲೆ ದೃಷ್ಟಿಯಂತು ತಾನಾಗಿಯೇ ಬದಲಾಗುತ್ತದೆ ಅಲ್ಲವೆ ಸೃಷ್ಟಿಯೂ ಬದಲಾಯಿತು. ಈಗ ತಮ್ಮ ದೃಷ್ಟಿಯೆಂತಹದ್ದಾಗಿದೆ! ತಮ್ಮ ಸೃಷ್ಟಿ ಅಥವಾ ಪ್ರಪಂಚವೇ ತಂದೆಯಾಗಿದ್ದಾರೆ. ತಂದೆ ಎಂದರೆ ಪರಿವಾರವೂ ಬಂದುಬಿಡುತ್ತದೆ ತಾನೆ. ಈಗ ಯಾರನ್ನೇ ನೋಡುತ್ತೀರೆಂದರೆ ಆತ್ಮಿಕ ದೃಷ್ಟಿಯಲ್ಲಿ ಶರೀರದ ಕಡೆಗೆ ದೃಷ್ಟಿ ಹೋಗಲು ಸಾಧ್ಯವೇ ಇಲ್ಲ ಏಕೆಂದರೆ ನಯನಗಳಲ್ಲಿ ತಂದೆಯು ಸಮಾವೇಶವಾಗಿರುತ್ತಾರೆ. ಯಾರ ನಯನಗಳಲ್ಲಿ ತಂದೆಯಿದ್ದಾರೆಯೋ ಅವರು ದೇಹಭಾನದಲ್ಲಿ ಹೇಗೆ ಬರುವರು? ತಂದೆಯು ಸಮಾವೇಶವಾಗಿದ್ದಾರೆಯೇ ಅಥವಾ ಸಮಾವೇಶವಾಗುತ್ತಿದ್ದಾರೆಯೇ ತಂದೆಯು ಸಮಾವೇಶವಾಗಿದ್ದಾರೆ ಎಂದಾಗ ನೋಡುವುದು ಮಾಡುವುದು ಯಾರು ಮಾಡುತ್ತಾರೆ ಶರೀರದ ಲೆಕ್ಕಾಚಾರದಿಂದಲೂ ಬಿಂದುವೇ ಇದೆ ತಾನೆ ಸಣ್ಣ ಬಿಂದು ಅದ್ಭುತವನ್ನು ಮಾಡುತ್ತದೆ ಹಾಗಿದ್ದಾಗ ದೇಹದ ಕಡೆಯಿಂದಲೂ ಸಣ್ಣ ಬಿಂದುವೇ ಅದ್ಭುತ ಮಾಡುತ್ತದೆ ಮತ್ತು ಆತ್ಮದ ಕಡೆಯಿಂದಲೂ ತಂದೆ ಬಿಂದು ಸಮಾವೇಶವಾಗಿದ್ದಾರೆ ಆದ್ದರಿಂದ ಮತ್ಯಾರು ಸಮಾವೇಶವಾಗಲು ಸಾಧ್ಯವಿಲ್ಲ ಹೀಗೆ ತಿಳಿಯುತ್ತೀರಾ? ಯಾವಾಗ ಪೂಜ್ಯಾತ್ಮರಾಗಿಬಿಟ್ಟರಿ ಅಂದಮೇಲೆ ಪೂಜ್ಯಾತ್ಮರ ನಯನಗಳು ಸದಾ ನಿರ್ಮಲವಾಗಿ ಇರುವುದನ್ನು ತೋರಿಸುತ್ತಾರೆ. ಅಭಿಮಾನ ಅಥವಾ ಅಪಮಾನ ಇರುವಂತೆ ತೋರಿಸುವುದಿಲ್ಲ. ಯಾವುದೇ ದೇವ ಅಥವಾ ದೇವತೆಯ ನಯನಗಳು ನಿರ್ಮಲ ಅಥವಾ ಆತ್ಮಿಕವಾಗಿರುತ್ತದೆ. ಅಂದಮೇಲೆ ಈ ನಯನವು ಯಾರದಾಗಿದೆ? ಯಾವಾಗ ಯಾರ ಪ್ರತಿಯಾದರೂ ಯಾವುದೇ

ಸಂಕಲ್ಪ ಬಂದಿತೆಂದರೆ ನೆನಪಿಟ್ಟುಕೊಳ್ಳರಿ- ನಾನು ಯಾರು! ನನ್ನ ಜಡಚಿತ್ರವೂ ಆತ್ಮೀಕ ನಯನವುಳ್ಳದ್ದಾಗಿದೆ ಅಂದಮೇಲೆ ನಾನಂತು ಚೈತನ್ಯದಲ್ಲಿ ಹೇಗಿದ್ದೇನೆ? ಜನರು ಈಗಿನವರೆಗೂ ತಮ್ಮ ಮಹಿಮೆಯಲ್ಲಿ ಹೇಳುತ್ತಾರೆ- ಸರ್ವಗುಣ ಸಂಪನ್ನ, ಸಂಪೂರ್ಣ ನರ್ವಿಕಾರಿ ಅಂದಮೇಲೆ ತಾವು ಯಾರಾಗಿದ್ದೀರಿ? ಸಂಪೂರ್ಣ ನಿರ್ವಿಕಾರಿ ಆಗಿದ್ದೀರಲ್ಲವೆ! ಅಂಶದಷ್ಟೂ ಸಹ ಯಾವುದೇ ವಿಕಾರವಿರಬಾರದು. ಸದಾ ಸ್ಮೃತಿಯಲ್ಲಿ ಇಟ್ಟುಕೊಳ್ಳಿರಿ- ನನ್ನ ಭಕ್ತರು ನನ್ನನ್ನು ಈ ರೂಪದಿಂದ ನೆನಪು ಮಾಡುತ್ತಿದ್ದಾರೆ. ಜಡಚಿತ್ರ ಮತ್ತು ಚೈತನ್ಯ ಚಿತ್ರದಲ್ಲಿ ಅಂತರವಂತು ಇಲ್ಲವೇ? ಇದರ ಪರಿಶೀಲನೆ ಮಾಡಿರಿ. ಚರಿತ್ರೆಯಿಂದ ಚಿತ್ರವಾಗುವುದು. ಸಂಗಮದಲ್ಲಿ ಪ್ರತ್ಯಕ್ಷದಲ್ಲಿ ಚರಿತ್ರೆಯನ್ನು ತೋರಿಸಲಾಯಿತು ಆದ್ದರಿಂದ ಈ ಚಿತ್ರಗಳಾಗಿವೆ, ಒಳ್ಳೆಯದು.

ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 20-01-1990.

***ಬ್ರಹ್ಮಾ ತಂದೆಯ ವಿಶೇಷ ಐದು ಹೆಜ್ಜೆಗಳು.***

ಪ್ರತೀ ಹೆಜ್ಜೆಯಲ್ಲಿ ತಂದೆಯನ್ನು ಅನುಸರಿಸಿರಿ ಎಂದು ಸರ್ವ ಮಕ್ಕಳಿಗೆ ತಂದೆಯು ಈ ಶ್ರೇಷ್ಠ ಶ್ರೀಮತವನ್ನು ಕೊಟ್ಟರು. ಮೊದಲ ಹೆಜ್ಜೆ ಸರ್ವಾಂಶತ್ಯಾಗಿ, ಎರಡನೇ ಹೆಜ್ಜೆ ಸದಾ ಆಜ್ಞಾಕಾರಿ, ಮೂರನೇ ಹೆಜ್ಜೆ ಪ್ರತಿ ಸಂಕಲ್ಪದಲ್ಲಿ ವಿಶ್ವಾಸ ಪಾತ್ರರು, ನಾಲ್ಕನೇ ಹೆಜ್ಜೆ ವಿಶ್ವ ಸೇವಾಧಾರಿ, ಐದನೇ ಹೆಜ್ಜೆ ಕರ್ಮ ಬಂಧನ ಮುಕ್ತ, ಕರ್ಮ ಸಂಬಂಧ ಮುಕ್ತ. ತಂದೆಯ ಸಮಾನವಾದ ಸ್ನೇಹ ದಯೆ ಉದಾರ ಹೃದಯಾಗಿ ಇರಿ. ನಿರ್ದಿಷ್ಟ ಸ್ಥಾನ, ನಿರ್ದಿಷ್ಟ ದೇಶದ ಕಲ್ಯಾಣಕಾರಿಗಳು ಎಂಬ ಭಾವವೇ ಸಂಕುಚಿತ ಹೃದಯಕ್ಕೆ ಗುರುತು. ಸಣ್ಣ ಹೃದಯ ಇರುವವರಿಗೆ ಖಜಾನೆ ವೃದ್ಧಿ ಆಗುವುದಿಲ್ಲ. ಶ್ರಮ ಜಾಸ್ತಿ ಮತ್ತು ಸಫಲತೆ ಕಡಿಮೆ ಇರುತ್ತದೆ. ಬೇಹದ್ ಭಾವವಿರುವ, ವಿಶ್ವಕಲ್ಯಾಣ ಮಾಡುವವರು ತನು, ಮನ, ಧನ, ಸಂಬಂಧದಲ್ಲಿ ಸಫಲತೆ ಪಡೆಯುತ್ತಾರೆ. ವಿಶಾಲ ಹೃದಯ ಇರುವವರಿಗೆ ಶ್ರಮ ಕಡಿಮೆ ಸಫಲತೆ ಜಾಸ್ತಿ ಲಭಿಸುತ್ತದೆ. ಬಹಳಷ್ಟು ಸೇವಾ ಕೇಂದ್ರಗಳಿವೆ, ಬಹಳಷ್ಟು ಜಿಜ್ಞಾಸುಗಳಿದ್ದಾರೆ, ಹೀಗೆ ಬಹಳ ಎನ್ನುವುದರಲ್ಲಿ ಹೋಗಬೇಡಿ ವಿಶಾಲ ಹೃದಯವನ್ನು ಇಟ್ಟುಕೊಳ್ಳಿರಿ. ಸ್ವಸೇವೆ ಮತ್ತು ವಿಶ್ವಸೇವೆಯ ಸಮಾನತೆಯನ್ನು ಇಟ್ಟುಕೊಳ್ಳಿರಿ. ಸ್ವಉನ್ನತಿಗೆ ಸಮಯ ಸಿಗದಷ್ಟು ಸೇವೆಯಲ್ಲಿ ನಿರತರಾಗಬೇಡಿರಿ. ಎಂದು ಹೇಳುತ್ತಾ ಶಿವ ಪರಮಾತ್ಮ ತಿಳಿಸಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಪ್ರತಿಯೊಂದು ಹೆಜ್ಜೆಯಲ್ಲಿ ತಂದೆಯನ್ನು ಅನುಸರಿಸುವ ಅತಿಸ್ನೇಹಿ ಮತ್ತು ಸಮೀಪ ಮಗು.

2. ನಾನು ತಂದೆಯ ಶ್ರೇಷ್ಠಮತದ ಅನುಸಾರ ಬ್ರಹ್ಮಾ ತಂದೆಯ ಪ್ರತಿ ಹೆಜ್ಜೆಯನ್ನು ಅನುಸರಿಸಿದ್ದೇನೆ.

3. ನಾನು ಪ್ರತಿ ಸಮಯ ತಂದೆ ಮತ್ತು ತಂದೆಯ ಶ್ರೀಮತವನ್ನು ನೆನಪಿಟ್ಟು ಪ್ರತಿಕರ್ಮದಲ್ಲಿ ಅತೀತವಾಗಿ ಮತ್ತು ಪ್ರಿಯವಾಗಿ ಇರುತ್ತಾ, ಮನಸ್ಸು ಬುದ್ಧಿಯನ್ನು ತಂದೆಗೆ ಸಮರ್ಪಣೆ ಮಾಡಿ ದೇಹ ಸಂಬಂಧಗಳಲ್ಲಿ ನನ್ನವರು ಎಂಬ ಭಾವವನ್ನು ತ್ಯಾಗ ಮಾಡಿರುವ ಸರ್ವಸ್ವತ್ಯಾಗಿ. (ಇದು ಮೊದಲ ಹೆಜ್ಜೆ)

4. ನಾನು ಪ್ರತಿ ಸಮಯ, ಪ್ರತಿ ವಿಷಯದಲ್ಲಿ ಸ್ವಪುರುಷಾರ್ಥದಲ್ಲಿ, ಯಜ್ಞ ಪಾಲನೆಯಲ್ಲಿ ನಿಮಿತ್ತವಾಗಿ ಇರುತ್ತಾ ತಂದೆ ಕೊಟ್ಟಿರುವ ಪ್ರತೀ ಆಜ್ಞೆಯನ್ನು ಪಾಲಿಸುತ್ತಾ ಸದಾ ಆಜ್ಞಾಕಾರಿಯಾಗಿದ್ದೇನೆ. (ಇದು ಎರಡನೆಯ ಹೆಜ್ಜೆ)

5. ನಾನು ಪ್ರತಿ ಸಮಯ, ಪ್ರತಿ ಸಂಕಲ್ಪದಲ್ಲಿ ಒಬ್ಬ ತಂದೆ ಹೊರತು ಮತ್ಯಾರು ಇಲ್ಲ ಎಂಬ ವಿಶ್ವಾಸ ಪಾತ್ರನ ಪ್ರತ್ಯಕ್ಷ ಸ್ವರೂಪ. (ಇದು ಮೂರನೆಯ ಹೆಜ್ಜೆ)

6. ನಾನು ಎಂತಹ ಪರಿಸ್ಥಿತಿ ಬಂದರೂ ಸತ್ಯತೆಯ ನಿರ್ಭಯ ಸ್ಥಿತಿಯಿಂದ ನಿರ್ಮಾಣ ಮತ್ತು ಅಧಿಕಾರದಿಂದ ಸಮಾನತೆಯನ್ನು ಇಟ್ಟುಕೊಂಡಿರುವ ವಿಶ್ವಸೇವಾಧಾರಿ.

7. ನಾನು ನಿರ್ಮಾಣ ಭಾವನೆ ನಿಮಿತ್ತ ಭಾವನೆ, ಬೆಹದ್ ಭಾವನೆಯಿಂದ ಸಿದ್ಧಿ ಸ್ವರೂಪವಾಗಿ ಸಫಲತೆಯನ್ನು ಪಡೆದಿದ್ದೇನೆ. (ನಾಲ್ಕನೇ ಹೆಜ್ಜೆ ವಿಶ್ವ - ಸೇವಾಧಾರಿ)

8. ನಾನು ಕರ್ಮ ಬಂಧನದಿಂದ ಕರ್ಮ ಸಂಬಂಧದಿಂದ ಅರ್ಥಾತ್ ಶರೀರ ಬಂಧನದಿಂದ ಮುಕ್ತನಾಗಿ ಫರಿಶ್ತಾ (ಕರ್ಮಾತೀತ ಸ್ವರೂಪ), ನಷ್ಟೋಮೋಹ ಸ್ಮೃತಿ ಸ್ವರೂಪ, ಸಮೀಪ ಮತ್ತು ಸಮಾನವಾಗಿ ಇದ್ದೇನೆ.

9. ನಾನು ಸಂಕಲ್ಪ, ಸ್ವಭಾವ ಮತ್ತು ಸಂಸ್ಕಾರಗಳಿಂದ ಬ್ರಹ್ಮಾ ತಂದೆಯ ಸಮಾನವಾಗಿ ಸರ್ವವಂಶ ಸಹಿತ ಸಮರ್ಪಣೆಯಾಗಿದ್ದೇನೆ.

10. ನನ್ನ ಸಂಸ್ಕಾರ ಸದಾ ತಂದೆಯ ಸಮಾನವಾದ ಸ್ನೇಹಿ, ದಯೆ ಮತ್ತು ಉದಾರಹೃದಯಿ.

11. ನಾನು ಬೇಹದ್ ಭಾವದಿಂದ ಪ್ರತಿಸ್ಥಾನದ ಕಲ್ಯಾಣ ಮಾಡಿರುವ ವಿಶ್ವಕಲ್ಯಾಣಕಾರಿ.

12. ಬೇಹದ್ ಸೇವಾಧಾರಿಯಾದ ನಾನು, ನನ್ನದು ಎಂಬುದನ್ನು ನಿನ್ನದು ಎಂಬುದರಲ್ಲಿ ಪರಿವರ್ತನೆ ಮಾಡಿ ಹದ್ದನ್ನು ಬೇಹದ್ದಿನಲ್ಲಿ ಪರಿವರ್ತಿಸಿದ್ದೇನೆ.

13. ನಾನು ಬೇಹದ್ ಸುವಾಸನೆಯಿಂದ ಇಲ್ಲಿ ತಂದೆಯ ಸಮಾನ ಮತ್ತು ಸಮೀಪವಾಗಿ ಇದ್ದು 21 ಜನ್ಮಗಳಿಗೆ ಬ್ರಹ್ಮಾ ತಂದೆಗೆ ಸಮೀಪವಾಗಿ ಇದ್ದೇನೆ.

14. ನಾನು ಸತ್ಯತೆ ಮತ್ತು ಸ್ವಚ್ಛತೆಯ ಚಾರ್ಟನ್ನು ಇಟ್ಟುಕೊಂಡಿದ್ದೇನೆ..

15. ನಾನು ಸ್ವಸೇವೆ ಮತ್ತು ಸರ್ವರ ಸೇವೆಯನ್ನು ಜೊತೆ ಜೊತೆಗೆ ಮಾಡುವ ಧೈರ್ಯವನ್ನು ಇಟ್ಟುಕೊಂಡಿದ್ದೇನೆ.

16. ನಾನು ನನ್ನ ಸ್ಥಿತಿಯನ್ನು ಸ್ಥಿರವಾಗಿಟ್ಟುಕೊಂಡು ಸೇವೆ ಮಾಡಿ ಸಫಲತೆಯನ್ನು ಪಡೆದಿದ್ದೇನೆ.

16. ನಾನು ಸಮಯ, ಮಾತು, ಸಂಕಲ್ಪ ಮತ್ತು ಶಕ್ತಿಯನ್ನು ವ್ಯರ್ಥದಿಂದ ಸಮರ್ಥದಲ್ಲಿ ಪರಿವರ್ತನೆ ಮಾಡಿ ಆತ್ಮಿಕ ಉಳಿತಾಯದ ಖಾತೆಯನ್ನು ತಯಾರು ಮಾಡಿದ್ದೇನೆ.